<u>**ಕಾರ್ಮಿಕ ನ್ಯಾಯಾಲಯ, ಮೈಸೂರು.**</u>

**Ref**:10/2024

ಎಂ.ಡಬ್ಲ್ಯೂ-1

<u>**ದಿನಾಂಕ 06.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**</u>

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಅಧಿಕೃತ ಪ್ರತಿನಿಧಿಯಾದ ಶ್ರೀ.ಹೆಚ್.ಎಸ್.ಜೆ. ರವರಿಂದ:**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ General Manager ಆಗಿದ್ದೆ. ಮೈಸೂರು ವಿಭಾಗಕ್ಕೆ ಬರುವುದು ಹೋಗುವುದು ಮಾಡುತ್ತಿದ್ದೆ. 2 ನೇ ಪಕ್ಷಗಾರರ ಸಂಸ್ಥೆಗೆ ನಾನು 2018 ನೇ ಇಸವಿಯಲ್ಲಿ ಸೇರಿಕೊಂಡಿರುತ್ತೇನೆ. ಸದರಿ ಸಂಸ್ಥೆಯಲ್ಲಿ ನಾವು ಪಿ.ಸಿ.ಬಿ. ಬೊರ್ಡ್ ಗಳನ್ನು ಮತ್ತು Energy meters ಗಳನ್ನು ತಯಾರು ಮಾಡುತ್ತೇವೆ. ಸದರಿ ಸಂಸ್ಥೆಯಲ್ಲಿ 70 ಜನ ಕಾರ್ಮಿಕರು ಇರುತ್ತಾರೆ. ಅದರಲ್ಲಿ ಖಾಯಂ ಆಗಿ 16 ಜನ ಇದ್ದರು. ಸದರಿ ಖಾಯಂ ನೌಕರರ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಕಿಲ್ಲ. ಸದರಿ ಯೂನಿಟ್ (unit) ಅನ್ನು 2018 ರಿಂದ ಪ್ರಾರಂಭ ಮಾಡಿರುತ್ತೇವೆ.

ಕಾರ್ಮಿಕರಿಗೆ ವೇತನವನ್ನು 2017 ಮಾರ್ಚ್ ರಿಂದ ಪ್ರಾರಂಭ ಮಾಡಿರುತ್ತೇವೆ ಎಂದರೆ ಹೌದು. ಸದರಿ ಕಾರ್ಖಾನೆಯನ್ನು ದಿನಾಂಕಃ02.10.2022 ರಲ್ಲಿ ಮುಕ್ತಾಯ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರವಾಹ ಬಂದು ನಂತರ ಅದನ್ನು handover ಮಾಡಿರುತ್ತೇವೆ ಎನ್ನುತ್ತಾರೆ. ಆ ರೀತಿ ಸಂಸ್ಥೆಯನ್ನು ಮುಚ್ಚಿದ ಬಗ್ಗೆ ಪರವಾನಗಿಯನ್ನು ಸರೆಂಡರ್ (surrender) ಮಾಡಿರುತ್ತೀರ ಎಂದರೆ ಸಾಕ್ಷಿ ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ.

ಸದರಿ ಸಂಸ್ಥೆಯನ್ನು ಮುಚ್ಚುವ ಬಗ್ಗೆ ಕಾರ್ಖಾನೆಯ ನೋಟಿಸ್ ಬೋರ್ಡ್ ನಲ್ಲಿ ನೋಟಿಸ್ ಅನ್ನು ಪ್ರಕಟಣೆ ಮಾಡಿರುತ್ತೇವೆ, ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದು

ಹಾಜರು ಮಾಡಿಲ್ಲ. ಕಾರ್ಖಾನೆ ಮುಚ್ಚಿದ ಬಗ್ಗೆ ಕಾರ್ಮಿಕರ ಮನೆಗೆ ನೋಟಿಸ್ ಅನ್ನು ಕಳುಹಿಸಿಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಕಾರ್ಮಿಕರಿಗೆ ಫೋನ್ ಮುಖಾಂತರ ವಿಚಾರ ತಿಳಿಸಿರುತ್ತೇವೆ. ಆ ರೀತಿ ಫೋನ್ ಮುಖಾಂತರ ವಿಚಾರ ತಿಳಿಸಿರುವ ಬಗ್ಗೆ call list ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ನಿ.ಎಂ.2 ರ ದಾಖಲೆ ನೋಟರೈಸ್ಡ್ ಪ್ರತಿ ಅಲ್ಲ ಎಂದರೆ ಸರಿ.

2022 ನೇ ಇಸವಿಯಲ್ಲಿ ಮಳೆ ಬಂದು ಕಾರ್ಖಾನೆ ಹಾಳಗಿದ್ದ ಬಗ್ಗೆ ಕಾರ್ಮಿಕ ಇಲಾಖೆಗೆ ನಾವು ತಿಳಿಸಿಲ್ಲ. ಆ ಬಗ್ಗೆ ನಾವು  ಪೋಲೀಸರ ಮುಂದು ಫಿರ್ಯಾದು ಕೊಟ್ಟಿಲ್ಲ. ಕಾರ್ಮಿಕರಿಗೆ ನಾನು ಸಂಬಳವನ್ನು ಬ್ಯಾಂಕ್ ಮೂಲಕ ಕೊಡುತ್ತಿದ್ದೇವು, ಸದರಿ ದಾಖಲೆಯನ್ನು ನಾವು ಹಾಜರು ಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಕಾರ್ಖಾನೆಯನ್ನು ದಿನಾಂಕಃ 02.10.2022 ಕ್ಕೆ ಮುಚ್ಚಿದ್ದು ಅದಕ್ಕೆ 3 ತಿಂಗಳ ಹಿಂದೆ ಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ ಎಂದರೆ ಸಾಕ್ಷಿ ಆಗಸ್ಟ್ ತಿಂಗಳಲ್ಲೇ ನಾವು ಕಾರ್ಖಾನೆ ಹಾಳಾಗಿದ್ದ ಬಗ್ಗೆ ತಿಳಿಸಿದ್ದೇವು ಹಾಗೂ ಅವರಿಗೆ ಬೆಂಗಳೂರಿಗೆ ಬಂದು ಕೆಲಸಕ್ಕೆ ಹಾಜರಾಗ ಬಹುದು ಎಂದು ತಿಳಿಸಿದ್ದೇವು ಎಂದು ಹೇಳುತ್ತಾರೆ. ಬೆಂಗಳೂರಿಗೆ ಬಂದು ಕೆಲಸಕ್ಕೆ ಹಾಜರಾಗಳು ನೋಟಿಸ್ ಬೋರ್ಡ್ ನಲ್ಲಿ ಹಾಕಿದ್ದೇವು.

ನಾವು ಯಾರಿಗೂ ಬೆಂಗಳೂರಿಗೆ ಬಂದು ಕೆಲಸಕ್ಕೆ ಸೇರಿಕೊಳ್ಳಿ ಎಂದು ತಿಳಿಸಿಲ್ಲ, ಅವರಿಗೆ ಸಂಬಳ ನೀಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಕಾರ್ಮಿಕರು ಬಂದು ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು ಎನ್ನುತ್ತಾರೆ. 2022 ನೇ ಇಸವಿಯಲ್ಲಿ ಕಾರ್ಮಿಕ ಇಲಾಖೆ ಮುಂದೆ ಸಂಬಳ ಕೊಟ್ಟಿಲ್ಲ, ಕೆಲಸ ಕೊಡುತ್ತಿಲ್ಲ ಎಂದು ವಿವಾದ ಎತ್ತಿದ್ದರು ಎಂದರೆ ಸಾಕ್ಷಿ ನಾವು ಸಂಬಳ ಕೊಡುತ್ತೇವೆ ಎಂದು ಅಲ್ಲಿ ಹೇಳಿರಲಿಲ್ಲ  ಎಂದು ಹೇಳುತ್ತೇವೆ.

ಕಾರ್ಮಿಕ ಇಲಾಖೆಯಲ್ಲಿ ನಮ್ಮ ಸಂಸ್ಥೆಯಿಂದ ಹೆಚ್.ಆರ್. ಮ್ಯಾನೇಜರ್ ವಿಕ್ರಮ್ ಪುಜಾರಿ ಹಾಜರಾಗಿದ್ದರು. ಅವರು ಯಾವ ದಿನಾಂಕದಲ್ಲಿ ಹಾಜರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಆ ರೀತಿ ಹಾಜರಾಗಿದ್ದರೆ ಅವರ ಸಹಿಯನ್ನು ಕಾರ್ಮಿಕ ಇಲಾಖೆಯಲ್ಲಿ ಪಡೆದುಕೊಂಡು Minutes ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾರ್ಮಿಕ ಇಲಾಖೆ ಮುಂದು ನಮ್ಮ ಸಂಸ್ಥೆಯ ವತಿಯಿಂದ ಯಾರು ಹಾಜರಾಗಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರ ಪಿ.ಎಫ್. ಹಣವನ್ನು ಸಂದಾಯ ಮಾಡಿಲ್ಲ ಎಂದರೆ ಸರಿಯಲ್ಲ. ಪಿ.ಎಫ್. ಹಣವನ್ನು ಸಂದಾಯ ಮಾಡಿರುವ ಬಗ್ಗೆ ದಾಖಲೆ ಕೊಟ್ಟಿಲ್ಲ. ಪಿ.ಎಫ್. ಹಾಗೂ ಸಂಬಳವನ್ನು ಸಂದಾಯ ಮಾಡಿರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ.

1 ನೇ ಪಕ್ಷಗಾರರಿಗೆ ನಾವು ಯಾವುದೇ gratuity ಅಥವಾ ಪರಿಹಾರ ಕೊಟ್ಟಿಲ್ಲ. ನಾವು ಕಾರ್ಮಿಕರಿಗೆ ಮೋಸ ಮಾಡುವ ಉದ್ದೇಶದಿಂದ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ ಕೆಲಸ ನೀಡಿವ ಜವಾಬ್ದಾರಿ ಹಾಗೂ ಬಾಕಿ ವೇತವನ್ನು ನೀಡುವ ಜವಾಬ್ದಾರಿ ನನಗೆ ಮೇಲೆ ಇರುತ್ತದೆ ಎಂದರೆ ಸಾಕ್ಷಿ ನಾವು ತುಂಬ ಸಾರಿ ಕರೆದಿರುತ್ತೇವೆ ಆದರೆ ಯಾರು ಬಂದಿಲ್ಲ ಎನ್ನುತ್ತಾರೆ. ಆ ರೀತಿ ಕರೆದಿರುವ ಬಗ್ಗೆ ನಾನು ಯಾವುದು ದಾಖಲೆ ಹಾಕಿಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು  ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**